ಗುಡಿಸಲು. ಜಗುಲಿಯಮೇಲೆ ಬೀಡಿ, ಬೆಂಕಿಪಟ್ಟಣ, ಕುರುಕಲು ತಿಂಡಿ, ಸೋಡಾ ಬಾಟಲು, ಬ್ರೆಡ್ಡು ಬನ್ನು ಪೇರಿಸಿಟ್ಟ ಸ್ಟ್ಯಾಂಡು. ಗೋಡೆಗೆ ಹಚ್ಚಿದ ತಮಿಳು ಸಿನಿಮಾ ಪೋಸ್ಟರುಗಳು. ಒಳಗಡೆ ಎರಡು ಮರದ ಬೆಂಚು, ಪ್ಲಾಸ್ಟಿಕ್ ಕುರ್ಚಿಗಳು. ಬೀಡಿ ಸಿಗರೇಟಿನ ಹೊಗೆ, ಸಾಂಬಾರು ರಸಂ ಪರಿಮಳ ಸರ್ವವ್ಯಾಪಿಯಾದಲ್ಲಿ ಕೆಲವರು ಅಂಗೈತುಂಬಾ ಅನ್ನ ಕಿವುಚುತ್ತ ಜೋರಾಗಿ ಹರಟುತ್ತ ಊಟ ಮಾಡುತ್ತಿದ್ದರು. ಖುಷಿಯಾದ ಶೆಲ್ವಮ್ಮ ಊಟದ ಕ್ಯಾರಿಯರನ್ನು ದಿನಾ ಫ್ಯಾಕ್ಟರಿಗೇ ತಲುಪಿಸುವ ಪ್ರಸ್ತಾಪವಿಟ್ಟಳು. ಆವತ್ತು ಫ್ಯಾಕ್ಟರಿಯಲ್ಲೆ ಮಲಗಿದವನಿಗೆ ಮರುದಿನ ಮೂರು ಕಿಲೋಮೀಟರು ದೂರದ ಬಡಾವಣೆಯಲ್ಲಿ ರೂಮಿನ ವ್ಯವಸ್ಥೆಯೂ ಆಯಿತು. ಹೋಗಿಬರಲು ಫ್ಯಾಕ್ಟರಿಯಲ್ಲಿದ್ದ ಹಳೆ ಸೈಕಲ್ ಬಳಸಲು ಕೊಟ್ಟರು. ಜೀವದಾಸರೆಯಾದ ನೆಲೆ ನೆಲ ಜಲದ ಜಾಲ ಇಲ್ಲಿಯೂ ಇತ್ತು.

★★★

ಘನಶ್ಯಾಮ ಒಳಬಂದಾಗ ಆಗಲೆ ಇಬ್ಬರು ಕಾಯುತ್ತಿದ್ದರು. ಅಲ್‌ಶೈನ್ ಮೆಟಲ್ ವರ್ಕ್ಸ್‌ನ ಏಜೆಂಟ್ ಪರಿಚಯದ ನಗುವಿನೊಂದಿಗೆ ಒಳಬಂದ. 'ಎಲ್ಲಾ ರೆಡಿಯಿದೆ. ಪ್ಯಾಕ್ ಮಾಡೋ ಮೊದಲು ಒಮ್ಮೆ ನೋಡಿಬಿಡಿ' ಅಂದವ ಅವನೊಂದಿಗೆ ಎದ್ದು ಒಳಗಿನ ಶೆಡ್ಡಿಗೆ ಬಂದ. ಇಲೆಕ್ಟ್ರೋ ಪ್ಲೇಟಿಂಗ್ ಕೆಲಸ ವಿವಿಧ ಹಂತದಲ್ಲಿತ್ತು. ಆಸಿಡ್ ವಾಸನೆ ಸಣ್ಣಕೆ ಇಡುಗಿತ್ತು. ರಾಸಾಯನಿಕಗಳು, ವಿವಿಧ ಲೋಹಗಳನ್ನು ಸುರಿದಿದ್ದ ಗೋಡೌನ್ ಹಾದು ಸುರಕ್ಷಾ ವ್ಯವಸ್ಥೆಯನ್ನೊಮ್ಮೆ ಮಾಮೂಲಿನಂತೆ ನೋಡಿ ಚೇಂಬರಿಗೆ ಬಂದಾಗ ಅಕೌಂಟೆಂಟ್ ಆವತ್ತಿನ ಬಿಲ್ಲುಗಳನ್ನು ತಂದಿದ್ದ. ಮುಗಿದ ಕೆಲಸಗಳ ಬಿಲ್ಲುಗಳವು. ಬಿಲ್ ಮೊತ್ತವನ್ನು ತೃಪ್ತಿಯಿಂದ ನೋಡುತ್ತ ಲಾಭವನ್ನು ಮನದಲ್ಲೆ ಎಣಿಸುತ್ತ ಸಹಿ ಮಾಡುವಾಗ ಮೊಬೈಲ್ ರಿಂಗಣಿಸಿತು. ಅಂಬಾಬಾಯಿ ಅತ್ಯವಶ್ಯವಿಲ್ಲದೆ ತನಗೆ ಫೋನು ಮಾಡುವುದಿಲ್ಲ. 'ಅಮ್ಮಾವ್ರಿಗೆ ವಾಂತಿಯಾಯ್ತು. ಸುಸ್ತಾಗಿ ಏದುಸಿರು ಬಿಡತಿದಾರೆ' ಅವಳ ದನಿಯಲ್ಲಿ ಗಾಬರಿಯಿತ್ತು. ಒಂದುಕ್ಷಣ ನಿರ್ಧಾರ ಮಾಡಲಾಗದೆ ಸುಮ್ಮನೆ ಕುಳಿತವ ಬಿಲ್ಲುಗಳಿಗೆ ಬೇಗಬೇಗ ಸಹಿ ಮಾಡಿ ಅರ್ಧಗಂಟೆಯಲ್ಲಿ ಮರಳಿ ಬರುವುದಾಗಿ ಪರ್ಸನಲ್ ಸೆಕ್ರೆಟರಿಗೆ ಹೇಳಿ ಎದ್ದ. ಮಧ್ಯವಯಸ್ಸು ದಾಟಿದ ಘನಶ್ಯಾಮನಿಗೆ ರಕ್ತದೊತ್ತಡ ಸುರುವಾಗಿತ್ತು. ಸಂಗಡ ಸ್ಥೂಲಕಾಯ. ಈಗೀಗ ಬೇಗ ಉದ್ವೇಗಕ್ಕೊಳಗಾಗಿಬಿಡುತ್ತಿದ್ದ. ಜೋರಾಗಿ ಶ್ವಾಸ ಬಿಡುತ್ತಲೆ ಒಳಬಂದವ ಹಾಸಿನಿ ಮಲಗಿದತ್ತ ಧಾವಿಸಿದ. 'ಸ್ವಲ್ಪ ವಾಂತಿಯಾಯ್ತು, ಮಾಮೂಲೇ... ನನ್ನ ಕೇಳದೆ ಅಂಬಾಬಾಯಿ ಸುಮ್ನೆ ನಿಮ್ಮನ್ನ ಗಾಬರಿ ಪಡಿಸಿದಾಳೆ' ದನಿಯಲ್ಲಿ ಶಕ್ತಿಯಿಲ್ಲ; ಅರೆತೆರೆದ ಕಣ್ಣಲ್ಲಿ ಆಕ್ಷೇಪಣೆ ಕಾಣುತ್ತಿತ್ತು. 'ಔಷಧ ತಗೊಂಡಿದ್ದೆ ತಾನೆ? ಡಾಕ್ಟರನ್ನ ಕರೆಯೋಣವ?' ಆತಂಕದಲ್ಲಿ ದನಿ ನಡುಗುತ್ತಿತ್ತು. 'ಅಯ್ಯೋ... ಬೇಡ ಅಂದ್ನಲ್ಲ. ಸುಧಾರಿಸ್ತಾ ಇದೆ. ನೀವೇ ಹೆಚ್ಚು ಸುಸ್ತಾಗಿದೀರ, ಏನಾದ್ರೂ ಕುಡೀರಿ...' ಆಯಾಸಕ್ಕೆ ದನಿ ಪಿಸುದನಿಯಾಗಿತ್ತು. ಅವಳ ಕಣ್ಣುಮುಚ್ಚಿದ ಮುಖವನ್ನು ಕ್ಷಣ ದಿಟ್ಟಿಸಿದವ ಎದ್ದು ಹಾಲಿಗೆ ಬಂದ. '...ಕುಡೀರಿ' ಹಾಲಿನ ಗ್ಲಾಸು ಹಿಡಿದ ಬಿಳಿಯ ಬೆರಳುಗಳು; ಇದೇ ಪಿಸುದನಿ. ಎಷ್ಟು ವರ್ಷ ಹಿಂದೆ? ಪರಮಶಿವಯ್ಯ ಚತುರ ಉದ್ಯಮಿ. ವ್ಯಾಪಾರ ದಿನೆದಿನೆ ಅಭಿವೃದ್ಧಿಯಾಗುತ್ತ ಹೋಗುತ್ತಿತ್ತು. 'ನಿನ್ನ ಕೆಲಸ ಮೆಚ್ಚುಗೆಯಾಗಿದೆ; ಹೀಗೇ ಕೆಲಸಮಾಡು, ನೀನೂ ಬೆಳಿತೀಯ' ಅನ್ನುತ್ತಿದ್ದ ಆಗಾಗ. ಪ್ಲಾಸ್ಟಿಕ್ ಬಕೆಟ್ಟು, ಮಗ್ಗು, ಪ್ಲೇಟುಗಳು, ವಿವಿಧ ಗಾತ್ರದ ಡಬ್ಬಿಗಳು ಹೀಗೆ ಅನೇಕ ದಿನಬಳಕೆ ವಸ್ತುಗಳ ಉತ್ಪಾದನೆ ನಡೆಯುವ ಫ್ಯಾಕ್ಟರಿ. ದೊಡ್ಡ ಬ್ಯಾರೆಲ್‌ಗಳಲ್ಲಿ ಮುಖ್ಯವಾಗಿ ಪಾಲಿಎಥಿಲಿನ್ ರಾಸಾಯನಿಕ ಆಮದಾಗುತ್ತಿತ್ತು. ಅದನ್ನು ಯಂತ್ರದಲ್ಲಿ ಕಾಯಿಸಿ ಬೇರೆಬೇರೆ ಗಾತ್ರದ ಮೋಲ್ಡ್‌ಗಳಲ್ಲಿ ಹರಿಸಿ, ತಣ್ಣಗಾಗಿಸಿ, ಶೇಪ್ ಕೊಟ್ಟು, ನಯವಾಗಿಸಿ, ಹೀಗೆ ಹಂತಹಂತವಾಗಿ ಹೊಳೆಯುವ ಬಣ್ಣಬಣ್ಣದ ಸರಕುಗಳು ಲಾರಿಯೇರುತ್ತಿದ್ದವು. ಲೋಹಗಳ ಜಾಗೆಯನ್ನು ಪ್ಲಾಸ್ಟಿಕ್ ಆವರಿಸಿಕೊಳ್ಳುತ್ತಿದ್ದ ಕಾಲ. ಇಲ್ಲಿ ತಯಾರಾಗುವ ಸಾಮಾನು ಗುಣಮಟ್ಟದಲ್ಲಿ, ಬಾಳಿಕೆಯಲ್ಲಿ ಒಳ್ಳೇ ಹೆಸರು ಪಡೆದಿತ್ತು. ಲಾಭ